ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 30 ನೇ ಸೆಪ್ಟೆಂಬರ್, 2020

ರಾಜ್ಯದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಬೆಳೆ ವಿಮೆ ಕುರಿತು

ಶ್ರೀ ಯು. ಬಿ. ವೆಂಕಟೇಶ್(ನಾಮನಿರ್ದೇಶನ ಹೊಂದಿದವರು) -

1123 (1137) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ರಾಜ್ಯದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಬೆಳೆ ವಿಮೆ ಯಾವುದು; ಅಧಿಸೂಚಿತ ಬೆಳೆಗಳಿಗೆ ನಿಗಧಿಪಡಿಸಿದ ಪ್ರೀಮಿಯಂ ದರಗಳೇನು; ಬೆಳೆ ವಿಮೆಯ ಪರಿಹಾರ ಪಡೆಯಲು ಬೆಳೆ ಸಮೀಕ್ಷೆಗೆ ಯಾವ ತಂತ್ರಜ್ಞಾನ ಬಳಸಲಾಗಿದೆ; ಇದರಿಂದ ರೈತರಿಗೆ ಉಪಯೋಗವಾಗಿದೆಯೇ;

(ಆ) ಉಪಯೋಗವಾಗಿದ್ದಲ್ಲಿ, ಈವರೆಗೆ ಎಷ್ಟು ರೈತರು ಬೆಳೆ ವಿಮೆಯನ್ನು ಪಡೆದಿದ್ದಾರೆ; ಪರಿಹಾರದ ಮೊತ್ತವೆಷ್ಟು;

(ಇ) ಇತ್ತೀಚೆಗೆ ಬಿಡುಗಡೆ ಮಾಡಿರುವ ಬೆಳೆ ಸಮೀಕ್ಷಾ ತಂತ್ರಜ್ಞಾನವು ರೈತ ಸ್ನೇಹಿಯಾಗಿದೆಯೇ; ಹಾಗಿದ್ದಲ್ಲಿ, ಬೆಳೆ ಸಮೀಕ್ಷಾ ತಂತ್ರಜ್ಞಾನವನ್ನು ಬಳಸಲಾಗದ ರೈತರಿಗೆ ಸ್ಥಳೀಯವಾಗಿ ತರಬೇತಿಯನ್ನು ನೀಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಈ) ಮೊಬೈಲ್ ಬಳಕೆ ಮಾಡದ ರೈತರ ಬೆಳೆ ಸಮೀಕ್ಷೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು; ಬೆಳೆ ಸಮೀಕ್ಷೆಯಲ್ಲಿ ಲೋಪದೋಷವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಜಿಲ್ಲಾವಾರು ವರದಿ ನೀಡುವುದು)